## ಮೊಟ್ಟೆಯ ಚಿತ್ರ

ಮೂವತ್ತು ವಿದ್ಯಾರ್ಥಿಗಳಿದ್ದ ಮೂರನೇ ಕ್ಲಾಸಿನ ತರಗತಿ ಆರಂಭವಾಗಿತ್ತು. ಕ್ಲಾಸ್ ಟೀಚರ್‌ಗೆ ಪ್ರಿನ್ಸಿಪಾಲರಿಂದ ಕರೆ ಬಂತು. 'ನೋಡಿ ಮಕ್ಕಳಾ... ಒಂದೈದು ನಿಮಿಷ ನಾನು ಪ್ರಿನ್ಸಿಪಾಲರ ಬಳಿ ಹೋಗಿ ಬರುವೆ. ಅಷ್ಟರೊಳಗೆ ನೀವೆಲ್ಲಾ ಮೊಟ್ಟೆ ಚಿತ್ರ ಬಿಡಿಸಬೇಕು' ಎಂದು ಹೇಳಿ ಆಚೆ ಹೋದ ಟೀಚರ್, ಐದೇ ನಿಮಿಷದಲ್ಲಿ ವಾಪಸ್ಸಾದರು. ಮಕ್ಕಳು ಬಿಡಿಸಿದ ಮೊಟ್ಟೆ ಚಿತ್ರ ನೋಡತೊಡಗಿದರು. ಕೊನೆಗೆ ಗುಂಡ ಬಿಡಿಸಿದ ಚಿತ್ರ ಕೈಗೆತ್ತಿಕೊಂಡರು. ಖಾಲಿ ಹಾಳೆಯ ಬಲಭಾಗದ ಕೆಳತುದಿಯಲ್ಲಿ ಕೆಲವು ಚುಕ್ಕಿಗಳಿದ್ದವು. 'ಇದೇನೊ ಗುಂಡಾ? ನಾನು ಮೊಟ್ಟೆ ಚಿತ್ರ ಬಿಡಿಸು ಅಂದ್ರೆ ನೀನು ಡಾಟ್ ಇಟ್ಟಿದ್ದೀಯ?' ಎನ್ನುತ್ತಿದ್ದಂತೆ ಆತ, 'ಹೌದು ಮಿಸ್, ನೀವು ಯಾವ ಮೊಟ್ಟೆ ಚಿತ್ರ ಅಂತ ಹೇಳಲಿಲ್ಲಾ, ಅದಕ್ಕೆ ನನಗೆ ಜಿರಲೆ ಮೊಟ್ಟೆ ನೆನಪಾಯ್ತು, ಅದನ್ನೇ ಬಿಡಿಸಿದೆ' ಎಂದಾಗ ತರಗತಿ ತುಂಬ ನಗೆ ತೇಲಾಡತೊಡಗಿತ್ತು.



**ಅರವಿಂದ ಜಿ. ಜೋಷಿ**



## ನೋಡಿಕೊಂಡು ಕೆಲಸ

ಮನೆ ಮುಂದೆ ನಿಂತಿದ್ದ ಪುಷ್ಪಾ ಆಂಟಿಯ ಮೇಲೆ ತುಂಟ ಮಂಜ ನೀರು ಸುರಿಯುತ್ತಿದ್ದ.

ಪುಷ್ಪಾ ಆಂಟಿ, 'ಏನಪ್ಪಾ ಮಂಜು, ಕೆಳಗೆ ನಾನು ನಿಂತಿದ್ದೀನಿ, ನೀನು ಬಾಲ್ಕನಿಯಿಂದ ನೀರು ಸುರಿತಾ ಇದ್ದೀಯ? ನೋಡಿ ಕೆಲಸ ಮಾಡಬೇಕು ಅಲ್ವಾ?' ಎಂದು ಕೇಳಿದರು.

ಅದಕ್ಕೆ ಮಂಜು, 'ಹೌದು ಆಂಟಿ, ನಾನು ನೋಡಿಯೇ ಕೆಲಸ ಮಾಡ್ತಾ ಇದ್ದೀನಿ. ನೀವು ನಿಂತಿದ್ದು ನೋಡಿದ್ದೀನಿ, ಹಾಗೇ ನೀರೂ ಸುರಿತಾ ಇದ್ದೀನಿ...' ಅಂದ.

**ಸುಮನಾ ರಮೇಶ್**